# ಮನಸೂರೆಗೊಳ್ಳುವ ಮಂಸೋರೆ 'ಹರಿವು'

ಗೆಳೆಯರ ಗುಂಪಿನ ನಡುವೆ 'ಮಂಸೋರೆ' ಎಂದೇ ಪರಿಚಿತರಾದವರು ಮಂಜುನಾಥ ಸೋಮಕೇಶವ ರೆಡ್ಡಿ. ಮಂಸೋರೆ ನಿರ್ದೇಶನದ ಚೊಚ್ಚಲ ಸಿನಿಮಾ 'ಹರಿವು' ಈಗ ದೆಹಲಿ ಚಿತ್ರೋತ್ಸವಕ್ಕೆ ಆಯ್ಕೆಯಾಗುವ ಮೂಲಕ ಸುದ್ದಿಯಲ್ಲಿದೆ. ಶೀರ್ಷಿಕೆಯಲ್ಲಿನ ಚಲನಶೀಲತೆ ಹಾಗೂ ಜೀವಂತಿಕೆ ಚಿತ್ರದಲ್ಲೂ ಇರುವುದು 'ಹರಿವು' ಸಿನಿಮಾದ ವಿಶೇಷ.

'ಪ್ರಜಾವಾಣಿ'ಯಲ್ಲಿ ಪ್ರಕಟಗೊಂಡ ಡಾ. ಆಶಾ ಬೆನಕಪ್ಪ ಅವರ ಬರಹವೊಂದರಿಂದ ಸ್ಫೂರ್ತಿ ಪಡೆದು, ಅದರ ಕವಲು ಕಥೆಯನ್ನು ಮಂಸೋರೆ 'ಹರಿವು' ಚಿತ್ರದಲ್ಲಿ ನಿರೂಪಿಸಿದ್ದಾರೆ. ಅಸಹಾಯಕ ಅಪ್ಪನೊಬ್ಬ ತನ್ನ ಮಗನ ಶವವನ್ನು ಬೆಂಗಳೂರಿನಿಂದ ಹೊಸಪೇಟೆ ಸಮೀಪದ ತನ್ನೂರಿಗೆ ತೆಗೆದುಕೊಂಡು ಹೋಗಲು ಪಡುವ ಪಡಿಪಾಟಲುಗಳು ಕಥೆಯ ಕೇಂದ್ರ. ಈ ಎಳೆಗೆ ಪೂರಕವಾಗಿ ಧಾವಂತದ ಬದುಕಿನಲ್ಲಿ ಸಂಬಂಧಗಳ ಪಲ್ಲಟಗಳು ಹಾಗೂ ಸಮಾಜದ ಜಡ್ಡುಗಟ್ಟುವಿಕೆಯನ್ನು 'ಹರಿವು' ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಈ ಹೊತ್ತಿನ ತರುಣ ತರುಣಿಯರು ತಮ್ಮ ಕೆಲಸದ ಒತ್ತಡದಲ್ಲಿ ವೈಯಕ್ತಿಕ ಬದುಕಿಗೆ ಅಷ್ಟಾಗಿ ಮಹತ್ವ ನೀಡದಿರುವುದರ ಸೂಚನೆಯೂ ಸಿನಿಮಾದಲ್ಲಿದೆ.

ಸಿನಿಮಾದ ಕೊನೆಗೆ ಸಹೃದಯರ ಮನಸ್ಸನ್ನು ಗಾಢ ವಿಷಾದ ಆವರಿಸುತ್ತದೆ. ಮಂಸೋರೆ ಅವರ ಈ ಪ್ರಯೋಗಶೀಲ ಸಿನಿಮಾ ಎಪ್ಪತ್ತು–ಎಂಬತ್ತರ ದಶಕದ ಕಮರ್ಷಿಯಲ್ ಚಿತ್ರಗಳಂತೆ ಸಹೃದಯರ ಕಣ್ಣುಗಳನ್ನು ಒದ್ದೆಯಾಗಿಸುತ್ತದೆ.

ಗಿರೀಶ್ ಗೌಡ 'ಹರಿವು' ಚಿತ್ರದ ನಿರ್ಮಾಪಕರು. ಹೊಸ ಕಲಾವಿದರು ಹಾಗೂ ತಂತ್ರಜ್ಞರ ತಂಡದೊಂದಿಗೆ ಮಂಸೋರೆ ತಮ್ಮ ಚಿತ್ರವನ್ನು ರೂಪಿಸಿದ್ದಾರೆ. ಕನ್ನಡ ಚಿತ್ರರಂಗದ ಪ್ರಸಿದ್ಧರೆಲ್ಲ ರೀಮೇಕ್ ಮಂತ್ರ ಜಪಿಸುತ್ತಿರುವಾಗ, ಮಂಸೋರೆಯಂಥ ತರುಣರು ಭಿನ್ನ ಸಿನಿಮಾಗಳನ್ನು ರೂಪಿಸುತ್ತಿರುವುದು ಗಮನಾರ್ಹ ಹಾಗೂ ಈ ತರುಣರೇ 'ನಾಳಿನ ಕನ್ನಡ ಸಿನಿಮಾ'ದ ಆಶಾಕಿರಣ.





# ಕನಸುಗಾರನ ಕಣ್ಮರೆ

'ಕನಸುಗಾರ' ಎನ್ನುವ ವಿಶೇಷಣವನ್ನು ನಿರ್ದೇಶಕ ಹಾಗೂ ಕಲಾವಿದರ ಕುರಿತಂತೆ ಬಳಸುವುದು ರೂಢಿ. ಆದರೆ, ಕನ್ನಡ ಚಿತ್ರರಂಗ ಕೆಲವು ಕನಸುಗಾರ ನಿರ್ಮಾಪಕರನ್ನು ಕಂಡಿದೆ. ಅಂಥ ವಿಶಿಷ್ಟ ಕನಸುಗಾರರಲ್ಲಿ ಒಬ್ಬರು ಕಳೆದ ವಾರ (ನ. 5ರಂದು) ನಿಧನರಾದ ಅಲ್ಲೂರಿ ರೆಡ್ಡಪ್ಪ ರಾಜು. 'ಸಹೋದರರ ಸವಾಲ್', 'ಸ್ನೇಹಿತರ ಸವಾಲ್' ಹಾಗೂ 'ಸಾಹಸ ಸಿಂಹ'– ಈ ಮೂರು ಸಿನಿಮಾಗಳೇ ಸಾಕು, ರಾಜು ಅವರ ಕನಸುಗಾರಿಕೆಯ ಶಕ್ತಿಗೆ! ಅಂದಹಾಗೆ, 'ಅಜಂತಾ ಮೂವೀಸ್'ನ ಈ ರಾಜು 'ಅಜಂತಾ ರಾಜು' ಹಾಗೂ 'ಎ.ಆರ್. ರಾಜು' ಎಂದೇ ಚಿತ್ರರಸಿಕರಿಗೆ ಪರಿಚಿತರು.

ರಾಜು ನಿರ್ಮಾಪಕರಷ್ಟೇ ಆಗಿರಲಿಲ್ಲ. ವಿತರಕರಾಗಿ ಚಿತ್ರೋದ್ಯಮಕ್ಕೆ ಬಲತುಂಬಿದವರು. 'ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ' ಅಧ್ಯಕ್ಷರಾಗಿ ದುಡಿದವರು. ಇಪ್ಪತ್ತೇಳು ಸಿನಿಮಾಗಳ ನಿರ್ಮಾಪಕರಾಗಿದ್ದ ಅವರು ತಮ್ಮ ಸಹೃದಯತೆಯಿಂದಲೂ ಹೆಸರಾದವರು. 'ವಿಜಯ್ ವಿಕ್ರಮ್', 'ಬೆಳ್ಳಿನಾಗ', 'ಭದ್ರಕಾಳಿ', 'ಸತಿ ಸಕ್ಕುಬಾಯಿ', 'ಸಿಂಹ ಗರ್ಜನೆ', 'ಪೂಜಾಫಲ', 'ಅಸಾಧ್ಯ ಅಳಿಯ'– ಅವರ ನಿರ್ಮಾಣದ ಕೆಲವು ಜನಪ್ರಿಯ ಚಿತ್ರಗಳು. 'ಸಹೋದರರ ಸವಾಲ್' ಚಿತ್ರದಲ್ಲಿ ವಿಷ್ಣುವರ್ಧನ್ ಹಾಗೂ ರಜನೀಕಾಂತ್ ಅವರನ್ನು ಒಟ್ಟಿಗೆ ಸೇರಿಸಿದ್ದು ಅವರ ಹಿರಿಮೆಗಳಲ್ಲೊಂದು.

'ಕನ್ನಡ ಚಿತ್ರರಂಗ ಎನ್ನುವುದು ಒಂದು ಕುಟುಂಬ' ಎನ್ನುವ ಹಿರಿಯರ ನಂಬಿಕೆ ರಾಜು ಅವರದೂ ಆಗಿತ್ತು. ಎಪ್ಪತ್ತನಾಲ್ಕು ವರ್ಷಗಳ ರಾಜು ಅವರ ನಿಧನದೊಂದಿಗೆ ಕನ್ನಡ ಚಿತ್ರರಂಗದ ಹಿರಿಯರೊಬ್ಬರು ನೆನಪುಗಳ ನೇಪಥ್ಯಕ್ಕೆ ಸಂದಂತಾಗಿದೆ.

■ ರಘು